**ಸಾಕ್ಷಿಯನ್ನು ದಿಃ13.08.2018 ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್.ಎಂ.ವಿ ವಕೀಲರಿಂದಃ**

ದಾವೆಯನ್ನು ಎಷ್ಟು ಸ್ವತ್ತುಗಳ ಮೇಲೆ ಹಾಕಿರುತ್ತಾರೆಂದು ನನಗೆ ಗೊತ್ತಿಲ್ಲ, ಆದರೆ ಸರ್ವೇನಂಬರ್ 171ರ ಮೇಲೆ ಹಾಕಿರುತ್ತಾರೆ. ಮುನಿಸ್ವಾಮಿಯವರಿಗೆ ಗಂಡು ಮಕ್ಕಳು 6 ಜನ ಇದ್ದು ಹೆಣ್ಣು ಮಕ್ಕಳು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ, ಮುನಿಸ್ವಾಮಿಯವರ ಗಂಡು ಮಕ್ಕಳ ಹೆಸರು ನನಗೆ ಗೊತ್ತಿಲ್ಲ, ಆದರೆ ಬಾಬು ಎಂಬುವವರ ಹೆಸರು ಮಾತ್ರ ನನಗೆ ಗೊತ್ತಿಲ್ಲ, ಸದರಿ ಬಾಬುರವರ ಸಹೋದರರು ಎಲ್ಲಿ ವಾಸ ಇರುತ್ತಾರೆಂದು ನನಗೆ ಗೊತ್ತಿಲ್ಲ, ಅವರ ನೌಕರಿಯ ಮೇಲೆ ಬೇರೆ ಕಡೆ ವಾಸವಿರುತ್ತಾರೆ.

ವಾದಿಯು ಕೂಲಿ ಕೆಲಸವನ್ನು ಮಾಡುತ್ತಾರೆ. ವಾದಿ ಮತ್ತು ಪ್ರತಿವಾದಿಯರ ತಂದೆ ಸರ್ಕಾರಿ ನೌಕರಿಯಲ್ಲಿದ್ದು ಏನು ಕೆಲಸ ಮಾಡುತ್ತಿದ್ದರೆಂದು ನನಗೆ ಗೊತ್ತಿಲ್ಲ, ಅವರು ಮರಣ ಹೊಂದಿರುತ್ತಾರೆ. ಸದರಿಯವರು 30 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ವಾದಿ ಮತ್ತು ಪ್ರತಿವಾದಿಯರ ತಾಯಿ ಮುನಿಲಕ್ಷ್ಮಮ್ಮ ಆಕೆಯ ಗಂಡ ಮರಣ ಹೊಂದುವ ಪೂರ್ವದಲ್ಲಿ ಮತ್ತು ನಂತರದಲ್ಲಿ ಯಾವುದೇ ಕೆಲಸವನ್ನು ಮಾಡುತ್ತಿರಲಿಲ್ಲ, ವಾದಿ ಮತ್ತು ಪ್ರತಿವಾದಿಯರ ತಾಯಿ ಏನು ವಿದ್ಯಾಭ್ಯಾಸ ಮಾಡಿರುತ್ತಾರೆಂದು ನಾನು ತಿಳಿದುಕೊಂಡಿರುವುದಿಲ್ಲ, ವಾದಿ ಮತ್ತು ಪ್ರತಿವಾದಿಯರ ತಂದೆಯ ಪಿಂಚಣಿ ಹಣವನ್ನು ಅವರ ತಾಯಿ ಪಡೆಯುತ್ತಿದ್ದಾರೆ ಎಂದರೆ ಸರಿ. ಸದರಿಯವರು ಪಿಂಚಣಿ ಪಡೆಯುವ ಸಮಯದಲ್ಲಿ ಕೆಲವೊಮ್ಮೆ ಹೆಬ್ಬೆಟ್ಟು ಮತ್ತು ಕೆಲವೊಮ್ಮೆ ಸಹಿ ಹಾಕುತ್ತಿದ್ದರು.

1964ರಲ್ಲಿ 3 ಎಕರೆ ಜಮೀನನ್ನು ಸರ್ವೇನಂಬರ್ 171ರಲ್ಲಿ ವಾದಿ ಪ್ರತಿವಾದಿಯರ ತಾಯಿ ಕೊಂಡು ಕೊಂಡಿರುತ್ತಾರೆ. ಆ ಸಮಯದಲ್ಲಿ ವಾದಿ ಹುಟ್ಟಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ,

ವಾದಿ ಪ್ರತಿವಾದಿಯರ ತಾಯಿಯ ಚಿಕಿತ್ಸಾ ವೆಚ್ಚವನ್ನು 2ನೇ ಪ್ರತಿವಾದಿಯೇ ಭರಿಸುತ್ತಿದ್ದರು ಎಂದರೆ ಸರಿಯಲ್ಲ, ವಾದಿ ಮತ್ತು ಪ್ರತಿವಾದಿಯರು ಬೇರೆ ಬೇರೆ ವಾಸವಿದ್ದರು ಎಂದರೆ ಸರಿ. ವಾದಿಯ ತಾಯಿ ಆಕೆಯ ಮೃತ ಮಗಳು ವೆಂಕಟರಾಜಮ್ಮನ ಜೊತೆಯಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ, ಸದರಿ ವೆಂಕಟರಾಜಮ್ಮ ದೈಹಿಕವಾಗಿ ಅಂಗವಿಕಲೆಯಾದ ಕಾರಣ ಆಕೆಯ ಮದುವೆಯಾಗದೇ ಇದ್ದ ಕಾರಣ ವಾದಿಯ ತಾಯಿ ಆಕೆಯ ಜೊತೆಯಲ್ಲೇ ವಾಸವಿದ್ದಳು ಎಂದರೆ ಸರಿಯಲ್ಲ,

2002ರಲ್ಲಿ ಬಂಗಾರಪೇಟೆಯಲ್ಲಿ ವಿಲ್‌ನ್ನು ವಾದಿಗೆ ವಾದಿಯ ತಾಯಿಯು ಬರೆದುಕೊಟ್ಟಿರುತ್ತಾರೆ. ಸದರಿ ಪತ್ರವನ್ನು ಯಾರು ತಂದರೆಂದು ನನಗೆ ಗೊತ್ತಿಲ್ಲ. ಆದರೆ ಅದನ್ನು ಆ ದಿನ ಬರೆದುಕೊಟ್ಟಿರುತ್ತಾರೆ. ಸದರಿ ಪತ್ರವನ್ನು ಬರೆಯುವಾಗ ನಾನು ಮತ್ತು ವಾದಿಯ ತಾಯಿ ಇದ್ದೆವು. ಸದರಿ ಮರಣಶಾಸನಕ್ಕೆ ಸಾಕ್ಷಿಯಾಗಲು ವಾದಿಯ ತಾಯಿ ನನಗೆ ಕೇಳಿರುತ್ತಾರೆ. ಸದರಿ ಮರಣಶಾಸನಕ್ಕೆ ನನ್ನ ಜೊತೆಯಲ್ಲಿ ಬೇರೆಯವರು ಯಾರು ಸಹಿ ಮಾಡಿಲ್ಲ, ನನಗೆ ಗೊತ್ತಿಲ್ಲ. ಸದರಿ ವಿಲ್‌ನ್ನು ನಾರಾಯಣಸ್ವಾಮಪ್ಪ ಎಂಬುವವರು ಬರೆದಿದ್ದು ಸಹಿ ಹಾಕಿರುತ್ತಾರೆ. ಸದರಿ ವಿಲ್‌ನ್ನು ಬರೆದ ನಂತರ ವಾದಿಯ ಸಹೋದರರಿಗೆ ಆ ವಿಷಯವನ್ನು ನಾನು ತಿಳಿಸಿರಲಿಲ್ಲ. ಸದರಿ ವಿಷಯವನ್ನು ವಾದಿಗೆ ತಿಳಿಸಿರುತ್ತೇನೆ. ವಿಲ್ಲನ್ನು ಬರೆಯುವ ಸಮಯದಲ್ಲಿ ಇತರೇ ಮಕ್ಕಳನ್ನು ಕರೆಸಿರಲಿಲ್ಲ ಅವರು ಹಾಜರಿರಲಿಲ್ಲ.

ವಿಲ್‌ಗೆ ವಾದಿಯ ತಾಯಿ ಹೆಬ್ಬೆಟ್ಟು ಮತ್ತು ಸಹಿಯನ್ನು ಎರಡನ್ನೂ ಮಾಡಿರುತ್ತಾರೆ. ವಾದಿಯು ಆತನ ತಾಯಿಯನ್ನು ಬಂಗಾರಪೇಟೆಗೆ ವಿಲ್‌ನ್ನು ಬರೆಯುವ ಸಮಯದಲ್ಲಿ ಕರೆದುಕೊಂಡು ಬಂದಿರುತ್ತಾರೆ. ವಾದಿಗೆ ಅವರ ತಾಯಿ ಸ್ವಇಚ್ಛೆಯಿಂದ ಯಾವುದೇ ವಿಲ್ಲನ್ನು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಸರ್ವೇನಂಬರ್ 171ರಲ್ಲಿ ವಾದಿ ಪ್ರತಿವಾದಿಯರಿಗೆ ಸಮಾನ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ನಾನು ಯಾವುದೇ ಮರಣಶಾಸನಕ್ಕೆ ಸಹಿ ಹಾಕದೇ ಇದ್ದರೂ ಸಹ ವಾದಿಯು ಸೃಷ್ಟಿಸಿದ ವಿಲ್‌ಗೆ ಅನುಸಾರವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ. ದಯಾನಂದ ಮೂರ್ತಿ)**
**ಪ್ರಭಾರ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**